ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಸೋಮವಾರ, ದಿನಾಂಕ: ೨೩ನೇ ಮಾರ್ಚ್, ೨೦೨೬**

---

**ಸಮೂಹ – I**

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು
೨. ಇಂಧನ ಸಚಿವರು
೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು
೫. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು
೬. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
೭. ಉನ್ನತ ಶಿಕ್ಷಣ ಸಚಿವರು

---

**ಸರ್ಕಾರಿ ಶಾಲೆಗಳ ಸಮಸ್ಯೆಗಳ ಕುರಿತು**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**
**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**
**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**
**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**
**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) –**

೧೮೧ (೧೭೯೨+೧೭೮೮+೧೭೫೩+೧೭೬೧+೧೭೯೫) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಸರ್ಕಾರಿ ಶಾಲೆಗಳಿಗೆ ಮಂಜೂರಾದ ಎಲ್ಲಾ ಹುದ್ದೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ಎಷ್ಟು ಹುದ್ದೆಗಳು ಖಾಲಿ ಇವೆ ; ನೇಮಕಾತಿ ಹಂತದಲ್ಲಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಸಂಪೂರ್ಣ ಮಾಹಿತಿ ನೀಡುವುದು ;

(ಆ) ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲದ ಶಾಲೆಗಳ ಸಂಖ್ಯೆ ಎಷ್ಟು ; ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸಂಪರ್ಕ, ಆಟದ ಮೈದಾನ ಇತ್ಯಾದಿ ಸೌಲಭ್ಯಗಳು ಇಲ್ಲದ ಶಾಲೆಗಳ ಸಂಖ್ಯೆ ಎಷ್ಟು ; ಸಮಸ್ಯೆಗಳನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಸಂಪೂರ್ಣ ಮಾಹಿತಿ ನೀಡುವುದು ;

(ಇ) ೨೦೨೪-೨೫ ಮತ್ತು ೨೦೨೫-೨೬ ನೇ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ಯಾವ ತಿಂಗಳಿನಲ್ಲಿ ವಿತರಿಸಲಾಗಿದೆ ; ವಿಳಂಬ ನೀತಿ ಅನುಸರಿಸಲಾಗಿದೆಯೇ ; ವಿಳಂಬಕ್ಕೆ ಕಾರಣಗಳೇನು ; ಸಂಪೂರ್ಣ ಮಾಹಿತಿ ನೀಡುವುದು ;

(ಈ) ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ SSLC ಮತ್ತು PUC ಫಲಿತಾಂಶದಲ್ಲಿ ಕಳಪೆ ಸಾಧನೆ ಕಂಡು ಬರುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಸಂಪೂರ್ಣ ಮಾಹಿತಿ ನೀಡುವುದು ?

## ಕಾಡಾನೆಗಳ ಹಾವಳಿಯನ್ನು ತಡೆಗಟ್ಟುವ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೨ (೧೭೨೨) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ೨೦೨೫-೨೬ನೇ ಸಾಲಿನಲ್ಲಿ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ; ಈ ಪ್ರಕರಣಗಳಲ್ಲಿ ಜೀವಹಾನಿ, ಆಸ್ತಿ ಹಾನಿ ಮತ್ತು ಬೆಳೆ ಹಾನಿ ಹೊಂದಿರುವವರಿಗೆ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದಲ್ಲಿ, ಪ್ರಕರಣವಾರು ಸಂಪೂರ್ಣ ವಿವರ ನೀಡುವುದು ;

(ಆ) ಕಾಡಾನೆಗಳ ಹಾವಳಿಗೆ ಕಡಿವಾಣ ಹಾಕಿ, ರೈತರಿಗೆ ಸೂಕ್ತ ಪರಿಹಾರ ಹಣವನ್ನು ಶೀಘ್ರವಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಯಲು ಎಷ್ಟು ಕಿ.ಮೀ. ರೈಲ್ವೆ ಬ್ಯಾರಿಕೇಡ್ ತಡೆಗೋಡೆ ಅವಶ್ಯಕವಿದೆ ; ಈ ತಡೆಗೋಡೆ ನಿರ್ಮಾಣಕ್ಕೆ ಅವಶ್ಯಕವಿರುವ ಅನುದಾನವೆಷ್ಟು ; ಇದಕ್ಕಾಗಿ ಸರ್ಕಾರವು ಕೈಗೊಂಡ ಕ್ರಮವೇನು ?

## ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರ , ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರುಗಳ ಬೇಡಿಕೆಗಳ ಈಡೇರಿಕೆ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೮೩ (೧೮೧೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರ , ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಮಾರ್ಚ್ ೧೧ ರಿಂದ ಮಾರ್ಚ್ ೧೫ ವರೆಗೆ ಓ.ಪಿ.ಡಿ. ಸೇವೆಗಳನ್ನು ಬಂದ್ ಮಾಡಿ ಮುಷ್ಕರ ಮಾಡುವ ಬಗ್ಗೆ ಸರ್ಕಾರಕ್ಕೆ ನೋಟೀಸ್ ನೀಡಿರುವುದು ನಿಜವೇ ; (ಹಾಗಿದ್ದಲ್ಲಿ, ಅವರ ಪ್ರಮುಖ ಬೇಡಿಕೆಗಳ ಕುರಿತು ಮಾಹಿತಿ ಒದಗಿಸುವುದು)

(ಆ) ಸರ್ಕಾರಿ ವೈದ್ಯರುಗಳ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ವೈದ್ಯರುಗಳು ಮುಷ್ಕರ ನಡೆಸುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಂಘಟನೆ ಪದಾಧಿಕಾರಿಗಳ ಜೊತೆ ಸಮಾಲೋಚನೆ ಸಭೆ ನಡೆಸಿದೆಯೇ ; ಹಾಗಿದ್ದಲ್ಲಿ, ಆ ಸಭೆಯಲ್ಲಿ ಯಾವುದಾದರೂ ಒಪ್ಪಂದಕ್ಕೆ ಬರಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಈ) ಪ್ರಾಥಮಿಕ ಆರೋಗ್ಯ ಕೇಂದ್ರ , ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಎಷ್ಟು ಸಂಖ್ಯೆಯಲ್ಲಿ ಹಾಗೂ ನಿಗದಿತ ಅವಧಿಯಲ್ಲಿ ಡ್ರಗ್ಸ್‌ಗಳನ್ನು ಒದಗಿಸಬೇಕಾಗಿತ್ತು , ಅಷ್ಟು ಒದಗಿಸಿರುವುದಿಲ್ಲವೆಂಬ ಆರೋಪ ಇರುವುದು ನಿಜವೇ ? (ವಿವರ ನೀಡುವುದು)

## ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳ ಮಾಹಿತಿ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) –**

೧೮೪ (೧೭೬೪) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟು ಮತ್ತು ಯಾವುವು ;

(ಆ) ವಿಶ್ವವಿದ್ಯಾನಿಲಯಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಇರುವ ಮಾನದಂಡಗಳು ಯಾವುವು ;

(ಇ) ಈ ವಿಶ್ವವಿದ್ಯಾನಿಲಯಗಳಿಗೆ ಸರ್ಕಾರದಿಂದ ನೇಮಕ ಮಾಡಿರುವ ಸಿಂಡಿಕೇಟ್ ಸದಸ್ಯರ ಸಂಖ್ಯೆ ಎಷ್ಟು ; ಮತ್ತು ಯಾವ ಯಾವ ವಿಶ್ವವಿದ್ಯಾನಿಲಯಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲಾಗಿದೆ ; ಮಾಹಿತಿಯನ್ನು ನೀಡುವುದು ;

(ಈ) ಅತೀ ಹಿಂದುಳಿದ ಪ್ರವರ್ಗ–೧ರ ಜಾತಿಗಳ ಅಭ್ಯರ್ಥಿಗಳಿಗೆ ಎಷ್ಟು ವಿಶ್ವವಿದ್ಯಾನಿಲಯಗಳಲ್ಲಿ ಸಿಂಡಿಕೇಟ್ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ; ಅವರ ಹೆಸರು, ಜಿಲ್ಲೆ ಮತ್ತು ವಿವರಗಳನ್ನು ನೀಡುವುದು ;

(ಉ) ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡುವ ಪ್ರಾಧಿಕಾರ ಯಾವುದು ; ಈ ವಿಶ್ವವಿದ್ಯಾನಿಲಯಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಸರ್ಕಾರಕ್ಕೆ ಅಧಿಕಾರವಿದೆಯೇ ; ಇದ್ದಲ್ಲಿ, ಎಷ್ಟು ಸದಸ್ಯರನ್ನು ಸರ್ಕಾರವು ಸಿಂಡಿಕೇಟ್ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ?

## ಸಿಂಧನೂರು ತಾಲ್ಲೂಕಿನಲ್ಲಿ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರ ಪ್ರಾರಂಭಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೫ (೧೭೧೩) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿಂಧನೂರು ತಾಲ್ಲೂಕಿನಲ್ಲಿ ಪ್ರತಿ ವರ್ಷ ಸುಮಾರು ೫–೬ ಸಾವಿರ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಿಂಧನೂರು ತಾಲ್ಲೂಕು ಹೆಚ್ಚಿನ ಸಂಖ್ಯೆಯ ಶಿಕ್ಷಕರನ್ನು ಒಳಗೊಂಡಿದ್ದು, ಎಸ್.ಎಸ್.ಎಲ್.ಸಿ. ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ದೂರ ಪ್ರಯಾಣದಿಂದ ಶಿಕ್ಷಕರಿಗೆ ಆಗುತ್ತಿರುವ ವೆಚ್ಚ ಮತ್ತು ಸಮಯ ನಷ್ಟದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರವನ್ನು ಸಿಂಧನೂರಿನಲ್ಲಿ ಪ್ರಾರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ;

(ಈ) ಇದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ ; ಹಾಗೂ ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕಿನಲ್ಲಿ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರವನ್ನು ಪ್ರಾರಂಭಿಸಲಾಗುವುದು ?

## ಕಾಡು ಪ್ರಾಣಿಗಳ ವಸ್ತುಗಳನ್ನು ಹಸ್ತಾಂತರಿಸುವ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೬ (೧೮೩೨) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಲೆನಾಡು ಭಾಗದ ಜನರು ಪ್ರಮುಖವಾಗಿ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿದ್ದ ಕಾಡು ಪ್ರಾಣಿಗಳ

ವಸ್ತುಗಳನ್ನು ಇಲಾಖೆಗೆ ಹಸ್ತಾಂತರಿಸುವಂತೆ ಹೊರಡಿಸಿರುವ ಆದೇಶವನ್ನು ಮಲೆನಾಡು ಭಾಗದ ಜನರು ವಿರೋಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು ; (ಸಂಪೂರ್ಣ ವಿವರ ನೀಡುವುದು)

(ಆ) ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರನ್ನು ಗಮನದಲ್ಲಿಟ್ಟುಕೊಂಡು ಸದರಿ ಆದೇಶವನ್ನು ತಿದ್ದುಪಡಿ ಮಾಡಿ ವಿನಾಯಿತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಬೀದರ್ ಜಿಲ್ಲೆಯಲ್ಲಿನ ಸ್ಮಾರ್ಟ್ ಮೀಟರ್ ಅಳವಡಿಕೆ, ಬಿಲ್ಲಿಂಗ್ ಸಮಸ್ಯೆ ಹಾಗೂ ಕೃಷಿ ಫೀಡರ್ ವ್ಯವಸ್ಥೆ ಕುರಿತು

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೭ (೧೭೭೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಎಷ್ಟು ಗೃಹ ಬಳಕೆದಾರರಿಗೆ ಮತ್ತು ಎಷ್ಟು ವಾಣಿಜ್ಯ ಮಳಿಗೆಗಳಿಗೆ 'ಸ್ಮಾರ್ಟ್ ಮೀಟರ್' (Smart Meters) ಅಳವಡಿಸಲಾಗಿದೆ ; ಈ ಯೋಜನೆ ಜಾರಿಗೆ ತಂದಿರುವ ಒಟ್ಟು ವೆಚ್ಚ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸ್ಮಾರ್ಟ್ ಮೀಟರ್ ಅಳವಡಿಕೆಯ ನಂತರ ವಿದ್ಯುತ್ ಬಿಲ್ ಮೊತ್ತದಲ್ಲಿ ಅಸಹಜ ಏರಿಕೆ ಕಂಡುಬಂದಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ; ಜಿಲ್ಲೆಯಲ್ಲಿ ದಾಖಲಾದ ಒಟ್ಟು ದೂರುಗಳ ಸಂಖ್ಯೆ ಎಷ್ಟು ; ಈ ದೂರುಗಳನ್ನು ಇತ್ಯರ್ಥಪಡಿಸಲು Gulbarga Electricity Supply Company Limited (GESCOM) ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ವಿವರವೇನು ;

(ಇ) ಸ್ಮಾರ್ಟ್ ಮೀಟರ್‌ಗಳಲ್ಲಿ ಉಂಟಾಗಬಹುದಾದ ತಾಂತ್ರಿಕ ದೋಷಗಳು ಅಥವಾ ಬಿಲ್ಲಿಂಗ್ ಸಾಫ್ಟ್‌ವೇರ್ ಲೋಪಗಳನ್ನು ಪರಿಶೀಲಿಸಲು ಸರ್ಕಾರಿ ಸ್ವಾಮ್ಯದ 'ಸ್ವತಂತ್ರ ಮೀಟರ್ ಪರೀಕ್ಷಾ ಪ್ರಯೋಗಾಲಯ' (Independent Meter Testing Lab) ವ್ಯವಸ್ಥೆ ಬೀದರ್ ಜಿಲ್ಲೆಯಲ್ಲಿ ಇದೆಯೇ ; ಇಲ್ಲದಿದ್ದರೆ, ಸಮೀಪದ ಜಿಲ್ಲೆಯಲ್ಲಿ ಲಭ್ಯವಿರುವ ಸೌಲಭ್ಯ ಯಾವುದು ;

(ಈ) ರೈತರಿಗೆ ಗುಣಮಟ್ಟದ ಹಾಗೂ ನಿರಂತರ ವಿದ್ಯುತ್ ಪೂರೈಕೆ ನೀಡುವ ಉದ್ದೇಶದಿಂದ ಜಾರಿಗೆ ತರಲಾಗುತ್ತಿರುವ 'ಪ್ರತ್ಯೇಕ ಕೃಷಿ ಫೀಡರ್' (Agriculture Feeder Bifurcation) ಯೋಜನೆ ಬೀದರ್ ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಪೂರ್ಣಗೊಂಡಿದೆ ; ಇನ್ನೂ ಎಷ್ಟು ಗ್ರಾಮಗಳಲ್ಲಿ ಕಾಮಗಾರಿ ಬಾಕಿ ಉಳಿದಿದೆ ; (ತಾಲ್ಲೂಕುವಾರು ಪಟ್ಟಿ ನೀಡುವುದು)

(ಉ) ಗ್ರಾಮೀಣ ಭಾಗಗಳಲ್ಲಿ ಟ್ರಾನ್ಸ್‌ಫಾರ್ಮರ್ (TC) ಸುಟ್ಟುಹೋದಾಗ ಅಥವಾ ತಾಂತ್ರಿಕ ದೋಷ ಉಂಟಾದಾಗ ೨೪ ಗಂಟೆಗಳೊಳಗೆ ದುರಸ್ತಿ ಮಾಡಲು ಜಿಲ್ಲಾ ಮಟ್ಟದಲ್ಲಿ 'ತುರ್ತು ಕಾರ್ಯಪಡೆ' (Emergency Response Team) ರಚಿಸಲಾಗಿದೆಯೇ ; ಕಳೆದ ಒಂದು ವರ್ಷದಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್ ದುರಸ್ತಿ/ಬದಲಾವಣೆ ಕಾರ್ಯಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗಿದೆ ?

## ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೧೮೮ (೧೭೩೨) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಕಳೆದ ನಾಲ್ಕು ವರ್ಷಗಳಿಂದ ಈವರೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ; ಸದರಿ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಬಳಸಲಾಗಿದೆ ; ಕಾಮಗಾರಿಗಳ ಫೋಟೋಸಹಿತ ಮತ್ತು ಗುತ್ತಿಗೆದಾರ ಸಹಿತ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಈವರೆಗೆ ಯಾವ ಯಾವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು ; ಸದರಿ ಟೆಂಡರ್‌ಗಳಲ್ಲಿ ಭಾಗಿಯಾದ ಟೆಂಡರ್‌ದಾರರ ಸಂಪೂರ್ಣ ಮಾಹಿತಿ ನೀಡುವುದು ; (ವರ್ಷವಾರು/ಕಾಮಗಾರಿವಾರು ಹಾಗೂ ಮೊತ್ತವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಟೆಂಡರ್‌ಗಳನ್ನು ಸರ್ಕಾರದ ಆದೇಶದನ್ವಯ ಸರಿಯಾಗಿ ಪಾಲಿಸಲಾಗಿದೆಯೇ ; ಪಾಲಿಸದೇ ಇದ್ದಲ್ಲಿ, ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ? (ಪೂರ್ಣ ಮಾಹಿತಿ ನೀಡುವುದು)

## ಶಾಲಾ ವಿದ್ಯಾರ್ಥಿಗಳಲ್ಲಿ ಮೊಬೈಲ್ ಬಳಕೆ ತಡೆಯುವ ಬಗ್ಗೆ

**ಶ್ರೀ ಪ್ರತಾಪ್‌ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೯ (೧೮೫೧+೧೭೫೪) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ೧೫ ವರ್ಷದೊಳಗಿನ ಶಾಲಾ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣಗಳನ್ನು ಸಂಪೂರ್ಣವಾಗಿ ನಿಷೇಧಿಸುವ ಮತ್ತು ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ಇಲ್ಲವೇ ಗಣನೀಯ ಮಟ್ಟದಲ್ಲಿ ತಡೆಯುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೊಬೈಲ್ ಬಳಕೆ ಮಕ್ಕಳನ್ನು ಅತ್ಯಂತ ಆಘಾತಕಾರಿ ಅಪಾಯಗಳಿಗೆ ಒಡ್ಡುತ್ತಿದ್ದ ಅವರನ್ನು ಮಾನಸಿಕ ಕ್ಷೋಭೆಗೆ ಕೂಡ ದೂಡುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಸೂಕ್ತ ಕ್ರಮ ವಹಿಸುವುದೇ ;

(ಇ) ಶಾಲಾ–ಕಾಲೇಜುಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮೊಬೈಲ್ ಬಳಸುತ್ತಿರುವುದರಿಂದ ಚಿಕ್ಕ ವಯಸ್ಸಿನಲ್ಲೇ ಮಾನಸಿಕ ಕ್ಷೋಭೆ ಮತ್ತು ಖಿನ್ನತೆಗೆ ಒಳಗಾಗುತ್ತಿರುವುದರಿಂದ ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಚಿಂತನೆ ನಡೆಸಿದೆಯೇ ;

(ಈ) ಮೊಬೈಲ್‌ನ ಅತಿಯಾದ ಬಳಕೆಯ ವಿರುದ್ಧ ಮಕ್ಕಳಲ್ಲಿ ಅಗತ್ಯ ಜಾಗೃತಿ ಮತ್ತು ಅರಿವು ಮೂಡಿಸಲು ಸರ್ಕಾರ ಈ ಕೂಡಲೇ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದೇ ?

## ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ PHC, CHC ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಅಗತ್ಯ ಔಷಧಿಗಳ ಖರೀದಿ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೯೦ (೧೮೯) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೨೩–೨೪ನೇ ಸಾಲಿನಿಂದ ೨೦೨೫–೨೬ನೇ ಸಾಲಿನವರೆಗೆ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು (PHC) ಸಮುದಾಯ ಆರೋಗ್ಯ ಕೇಂದ್ರಗಳು (CHC) ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಔಷಧಗಳನ್ನು ಖರೀದಿಸಲು ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ ; (ವರ್ಷಾವಾರು ವಿವರಗಳನ್ನು ಒದಗಿಸುವುದು)

(ಆ) ಈ ಭಾಗದಲ್ಲಿ ಕಳೆದ ಕೆಲವು ತಿಂಗಳುಗಳಿಂದ, ಜೀವರಕ್ಷಕ ಹಾಗೂ ಅತ್ಯಗತ್ಯ ಔಷಧಿಗಳ ಖರೀದಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (KSMSCL) ಔಷಧಿಗಳ ಖರೀದಿ ಪ್ರಕ್ರಿಯೆಯಲ್ಲಿ (Procurement Procedure) ವಿಳಂಬ ಮಾಡುತ್ತಿರುವುದು ಮತ್ತು ಖರೀದಿ ನಿಯಮಗಳನ್ನು ಉಲ್ಲಂಘಿಸುತ್ತಿರುವುದು ಆಸ್ಪತ್ರೆಗಳಲ್ಲಿನ ಈ ಔಷಧಿಗಳ ಅಭಾವಕ್ಕೆ ಕಾರಣವಲ್ಲವೆ ; (ಕಳೆದ ಒಂದು ವರ್ಷದಲ್ಲಿ ಔಷಧಿಗಳಿಗಾಗಿ ಮೀಸಲಿಟ್ಟ ಅನುದಾನ ಮತ್ತು ವ್ಯಯಿಸಲಾದ ಮೊತ್ತದ ವಿವರ ನೀಡುವುದು)

(ಈ) ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಲಭ್ಯವಿಲ್ಲದ ಕಾರಣ ಬಡ ರೋಗಿಗಳು ಅನಿವಾರ್ಯವಾಗಿ ಹೊರಗಿನ ಖಾಸಗಿ ಮೆಡಿಕಲ್ ಔಷಧದ ಅಂಗಡಿಗಳಿಂದ ಹೆಚ್ಚಿನ ಬೆಲೆಗೆ ಔಷಧಿಗಳನ್ನು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದು ಉಚಿತ ಆರೋಗ್ಯ ಸೇವೆಯ ವೈಫಲ್ಯವಲ್ಲವೇ ;

(ಉ) ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ.೧೦೦% ಔಷಧಿಗಳ ಲಭ್ಯತೆಯನ್ನು ಖಚಿತಪಡಿಸಲು ಮತ್ತು ಬಡ ರೋಗಿಗಳಿಗೆ ಆಗುತ್ತಿರುವ ಆರ್ಥಿಕ ಹೊರೆಯನ್ನು ತಪ್ಪಿಸಲು ಸರ್ಕಾರವು ರೂಪಿಸಿರುವ ತುರ್ತು ಕಾರ್ಯಯೋಜನೆಗಳೇನು ?

## ಕೇಂದ್ರ ಸರ್ಕಾರವು ಹಿರಿಯ ನಾಗರಿಕರಿಗೆ ಆಯುಷ್ಮಾನ್ ಭಾರತ್ ಯೋಜನೆಯನ್ನು ವಿಸ್ತರಿಸಿರುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೧ (೧೭೪೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ಸರ್ಕಾರವು ೨೦೨೦ ರಿಂದ ೭೦ ವರ್ಷ ಮೇಲ್ಪಟ್ಟ ಎಲ್ಲ ಹಿರಿಯ ನಾಗರಿಕರಿಗೂ ಆಯುಷ್ಮಾನ್ ಭಾರತ್ ಯೋಜನೆಯನ್ನು ವಿಸ್ತರಿಸಿ ಅಂತಹ ಅರ್ಹ ಫಲಾನುಭವಿಗಳಿಗೆ ಪ್ರತಿಯೊಂದು ರಾಜ್ಯದಲ್ಲಿ ಆಯುಷ್ಮಾನ್ ವಯೋ ವಂದನ ಕಾರ್ಡ್ ನೀಡಲಾಗಿದ್ದು, ರಾಜ್ಯದಲ್ಲಿ ಸದರಿ ಕಾರ್ಡ್‌ಗಳನ್ನು ಪಡೆಯಲು ಎಷ್ಟು ಜನ ನೋಂದಾಯಿಸಿಕೊಂಡಿದ್ದಾರೆ ; ನೋಂದಾಯಿತರಾದವರಲ್ಲಿ ಎಷ್ಟು ಜನರಿಗೆ ವಯೋ ವಂದನ್ ಕಾರ್ಡ್ ವಿತರಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬಾಗಲಕೋಟೆ ಜಿಲ್ಲೆಯಲ್ಲಿ ೭೦ ವರ್ಷ ಮತ್ತು ೭೦ ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರ ಸಂಖ್ಯೆ ಎಷ್ಟು ; (ಪುರುಷ ಹಾಗೂ ಮಹಿಳಾ ಹಿರಿಯ ನಾಗರಿಕರ ಮಾಹಿತಿಯನ್ನು ತಾಲ್ಲೂಕುವಾರು ಪ್ರತ್ಯೇಕವಾಗಿ ನೀಡುವುದು)

(ಇ) ಸದರಿ ಯೋಜನೆಯ ಲಾಭ ಪಡೆಯಲು ಬಾಗಲಕೋಟೆ ಜಿಲ್ಲೆಯಲ್ಲಿ ನೋಂದಾಯಿಸಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು ; ವಯೋ ವಂದನ ಕಾರ್ಡ್ ವಿತರಣೆಯಾದ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಸದರಿ ಯೋಜನೆಯು ಜಿಲ್ಲೆಯಲ್ಲಿನ ಎಲ್ಲಾ ಅರ್ಹ ಹಿರಿಯ ನಾಗರಿಕರಿಗೆ ತಲುಪುವಂತಾಗಲು ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರವಾಗಿ ತಿಳಿಸುವುದು ; ಈ ಯೋಜನೆಯಡಿ ಯಾವ ಕಾಯಿಲೆ ಮತ್ತು ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಬಹುದಾಗಿದೆ ; ಈವರೆಗೆ ಜಿಲ್ಲೆಯಲ್ಲಿ ಎಷ್ಟು ಅರ್ಹ ಫಲಾನುಭವಿಗಳು ಚಿಕಿತ್ಸೆ ಪಡೆದುಕೊಂಡಿರುತ್ತಾರೆ ? (ವಿವರವಾದ ಮಾಹಿತಿಯನ್ನು ನೀಡುವುದು)

## ಜಿಲ್ಲಾವಾರು ಆಹಾರ ಧಾನ್ಯಗಳ ಹಂಚಿಕೆ ಮತ್ತು ಸಿ.ಸಿ.ಟಿ.ವಿ.ಗಳ ಅಳವಡಿಕೆ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೯೨ (೧೭೪೫) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅನ್ನಭಾಗ್ಯ ಯೋಜನೆಯಡಿಯಲ್ಲಿ ಅಕ್ಕಿ ಸೇರಿದಂತೆ ಇತರೆ ಧಾನ್ಯಗಳನ್ನು ಜಿಲ್ಲೆಗಳಿಗೆ ಹೇಗೆ ಹಂಚಿಕೆ ಮಾಡಲಾಗುವುದು ; ೨೦೨೩ ರಿಂದ ಇಲ್ಲಿಯವರೆಗೆ ಜಿಲ್ಲಾವಾರು ನಿಗದಿ ಮಾಡಿದ ಪ್ರಮಾಣ ಹಾಗೂ ಹಂಚಿಕೆ ಮಾಡಿದ ಪ್ರಮಾಣದ ಸಂಪೂರ್ಣ ವಿವರ ನೀಡುವುದು ; (ಜಿಲ್ಲಾವಾರು ಮತ್ತು ವರ್ಷವಾರು ಪ್ರತ್ಯೇಕವಾಗಿ ನೀಡುವುದು)

(ಆ) ಕೆಲವು ಜಿಲ್ಲೆಗಳಿಗೆ ಶೇ. ೧೦೦ ರಷ್ಟು ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಹಂಚಿಕೆ ಮಾಡದಿರಲು ಕಾರಣಗಳೇನು ;

(ಇ) ರಾಜ್ಯದಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳಿಗೆ ಮತ್ತು ಗೋದಾಮುಗಳಲ್ಲಿ ಸಿ.ಸಿ.ಟಿ.ವಿ. ಹಾಗೂ ವೇ ಬ್ರಿಡ್ಜ್ ಅಳವಡಿಸಲಾಗಿದೆ ಹಾಗೂ ಎಷ್ಟು ಸ್ಥಳಗಳಲ್ಲಿ ಬಾಕಿ ಇದೆ ; ಇಲ್ಲಿಯವರೆಗೆ ಬಾಕಿ ಇರಲು ಕಾರಣಗಳೇನು ?

## ಭೀಮಗಡ ವ್ಯಾಪ್ತಿಯ ತಳೆವಾಡಿ ಗ್ರಾಮದ ಸದಸ್ಯರಿಗೆ ಪರಿಹಾರ ಸಿಗದಿರುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೧೯೩ (೧೮೫೯) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭೀಮಗಡ ಅಭಯಾರಣ್ಯ ವ್ಯಾಪ್ತಿಯಲ್ಲಿ ಬರುವ ತಳೆವಾಡಿ ಗ್ರಾಮದ ಎಷ್ಟು ಕುಟುಂಬಗಳನ್ನು ಸ್ಥಳಾಂತರ ಮಾಡಲಾಗಿದೆ ಮತ್ತು ಅವರಿಗೆ ನೀಡಿರುವ ಪರಿಹಾರ ಮೊತ್ತ ಎಷ್ಟು ; (ಪೂರ್ಣ ಮಾಹಿತಿ ನೀಡುವುದು)

(ಆ) ತಳೆವಾಡಿ ಗ್ರಾಮದ ಸ್ಥಳಾಂತರಕ್ಕಾಗಿ ಅರ್ಜಿ ಸಲ್ಲಿಸಿದವರ ಪೈಕಿ ೪ ಕುಟುಂಬಗಳ ತಲಾ ಒಬ್ಬ ಸದಸ್ಯರಿಗೆ ಪರಿಹಾರ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸದರಿ ೪ ಸದಸ್ಯರಿಗೆ ಪರಿಹಾರ ಸಿಗದಿರಲು ಕಾರಣ ಮತ್ತು ಪರಿಹಾರ ಕೊಡಲು ಸರ್ಕಾರ ತೆಗೆದುಕೊಳ್ಳುವ ಆದ್ಯತಾ ಕ್ರಮಗಳನ್ನು ತಿಳಿಸುವುದು ?

## ಕನ್ನಡ ಶಾಲೆಗಳಿಗೆ ವೇತನಾನುದಾನ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೧೯೪ (೧೮೩೩) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ೧೯೯೫ ರಿಂದ ೨೦೨೫ರ ಅವಧಿಯಲ್ಲಿ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಅನುದಾನರಹಿತ ಕನ್ನಡ ಮಾಧ್ಯಮದ ಪ್ರೌಢಶಾಲೆ ಮತ್ತು

ಪದವಿ ಪೂರ್ವ ಶಾಲಾ ಕಾಲೇಜುಗಳೆಷ್ಟು ; (ಜಿಲ್ಲಾವಾರು ವಿಳಾಸದೊಡನೆ ವಿವರ ನೀಡುವುದು)

(ಆ) ಸದರಿ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಬೋಧಕ, ಬೋಧಕೇತರರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸದರಿ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಬೇಕಾಗುವ ವೆಚ್ಚವೆಷ್ಟು ; (ವಿವರ ನೀಡುವುದು)

(ಈ) ಸದರಿ ಶಾಲಾ ಕಾಲೇಜುಗಳನ್ನು ಯಾವ ಕಾಲಮಿತಿಯಲ್ಲಿ ವೇತನಾನುದಾನಕ್ಕೆ ಒಳಪಡಿಸಲಾಗುತ್ತದೆ ?

## ಸರ್ಕಾರಿ ITI ಕಾಲೇಜುಗಳಲ್ಲಿ ಯಂತ್ರೋಪಕರಣಗಳಿಲ್ಲದಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೧೯೫ (೧೭೬೫) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ (ITI) ಸಂಖ್ಯೆ ಎಷ್ಟು ; ಇವುಗಳಲ್ಲಿ ಮಹಿಳೆಯರಿಗಾಗಿ ಮೀಸಲಿಟ್ಟ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೫ ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಗಳ ಕೊರತೆ ಕಾರಣ ಮುಚ್ಚಲ್ಪಟ್ಟ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) DGT ನವದೆಹಲಿರುವರ ಪರಿಷ್ಕೃತ ಪಠ್ಯಕ್ರಮದನುಸಾರ ಸರ್ಕಾರಿ ಕಾಲೇಜುಗಳಲ್ಲಿ ಯಂತ್ರೋಪಕರಣಗಳ ಲಭ್ಯವಿಲ್ಲದಿರುವುದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಯಂತ್ರೋಪಕರಣಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಯಾವ ಅವಧಿಯೊಳಗೆ

ಯಂತ್ರೋಪಕರಣಗಳನ್ನು ಒದಗಿಸುವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪೈಕಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಲಭ್ಯವಿಲ್ಲದ ಸಂಸ್ಥೆಗಳ ಸಂಖ್ಯೆ ಎಷ್ಟು ; ನಿವೇಶನ ಒದಗಿಸಿ ಕಟ್ಟಡ ನಿರ್ಮಿಸಿಕೊಡಲು ಸರ್ಕಾರದ ಕ್ರಮಗಳೇನು ;

(ಊ) ವೃತ್ತಿಪರ ತರಬೇತಿ ನೀಡುವ ಉದ್ದೇಶದಿಂದ ರಾಜ್ಯದ ಯಾವುದಾದರೂ ಕಾರಾಗೃಹಗಳಲ್ಲಿ ಐ.ಟಿ.ಐ. ಕಾಲೇಜು ಆರಂಭಿಸುವ ಚಿಂತನೆ ಸರ್ಕಾರಕ್ಕೆ ಇದೆಯೇ; ಈ ಸಂಬಂಧ ಕಾರಾಗೃಹ ಇಲಾಖೆಯಿಂದ ಪ್ರಸ್ತಾವನೆ ಸ್ವೀಕೃತವಾಗಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ 805./ಪಿ7

**List of Questions for Oral Answers**

**Total No. of Questions - 15**

# LIST - 13

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Monday, the 23rd March, 2026

**GROUP - I**

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for School Education and Literacy
7. Minister for Higher Education

**PROBLEMS OF GOVERNMENT SCHOOLS**

**Sri Nirani Hanamant Rudrappa (Graduates' Constituency) -**

**Sri Shashil G.Namoshi (Teachers' Constituency) -**

**Sri T.N. Javarayi Gowda (Elected by Legislative Assembly) -**

**Sri Ramojigowda (Graduates' Constituency) -**

**Sri D.T. Srinivas(D.T.S) (Teachers' Constituency) -**

181 (1792+1788+1753+1761+1795) Will the Minister for School Education and Literacy be pleased to state:-

(a) the total number of posts that have been sanctioned for the Government schools in the State; the number of posts which are lying vacant at present; the number of posts which are in the recruitment stage; complete information be furnished ;

(b) the number of schools which are not having the basic facilities in the Government schools; the number of schools which are not having basic facilities like drinking water, toilets, electricity connection, playground etc; the steps taken by the Government to setright the same; complete information be furnished ;

(c) the month in which the shoes and socks have been distributed to school children during the academic years 2024-25 and 2025-26, whether the delay tactic is being followed; the reasons for the delay ; complete information be furnished ;

(d) the poor performance is being found in SSLC and PUC result in various districts of North Karnataka, the steps taken by the Government to setright the same, the steps taken by the Government to improve the quality of education; complete information be furnished ?

## PREVENTION OF MENACE OF WILD ELEPHANTS

**Sri S. Ravi (Local Authorities Constituency) -**

182 (1722) Will the Minister for Forest, Ecology and Environment be pleased to state:-

(a) whether it has come to the notice of the Government that the menace of wild elephant is being increased in Bengaluru South district ; if so, the number of cases that have come to light during the year 2025-26 ; whether the step has been taken to provide the compensation to the persons who have lost their life, property damage and loss of crop in these cases; if so, casewise complete details be furnished ;

(b) the measures taken by the Government to curb the menace of wild elephants and to provide an appropriate compensation amount to farmers at the earliest ; (complete details be furnished)

(c) the length of K.M. of railway barricade and fencing that is required to prevent the menace of wild elephants in

Bengaluru South district ; the required grant for the construction of this barricade ; the measures taken by the Government therefor ?

## FULFILMENT OF DEMANDS OF THE DOCTORS IN THE STATE

**Sri S.V. Sankanur (Graduates' Constituency) -**

183 (1813) Will the Minister for Health and Family Welfare be pleased to state:-

(a) whether it is true that the notice has been given to the Government with regard to protest by shutting down O.P.D services from March 11 to March 15 by the doctors who are working in Primary Health Centres, taluk and district hospitals of the State ; (if so, the information with regard to the major demands thereof be furnished)

(b) the measure taken by the Government to fulfil the demands of the Government doctors ; (complete information be furnished)

(c) whether the consultation meeting has been conducted with concerned office bearers of the association in view of conducting protest by the doctors; if so, whether any decisions have been taken in this meeting ; (information be furnished)

(d) whether it is true about the allegation that the number of drugs that have to be provided in the prescribed period have not been provided for the Primary Health Centres, taluk and district hospitals ? (details be furnished)

## INFORMATION OF GOVERNMENT AND PRIVATE UNIVERSITIES IN THE STATE

**Sri D.T. Srinivas (D.T.S) (Teachers' Constituency) -**

184 (1794) Will the Minister for Higher Education be pleased to state:-

(a) the total number of Government and private universities in the State and the particulars thereof ;

(b) the particulars of prevailing criterieas to appoint the syndicate members to the universities ;

(c) the number of syndicate members who have been appointed by the Government to these universities; and the particulars of universities for which the syndicate members have been appointed; information be furnished ;

(d) the number of universities in which the candidates of category-1 castes of most backward classes have been appointed as syndicate members; the details of their name, districts and details be furnished ;

(e) the name of the appointing authority for the syndicate members to the private universities ; whether the Government have the power to appoint the syndicate members to these universities ; if so, the number of members that have been appointed by the Government as syndicate members ?

**COMMENCEMENT OF S.S.L.C EVALUATION CENTRE IN SINDHANUR TALUK**

**Sri Basanagouda Badarli (Elected by Legislative Assembly)-**

185 (1713) Will the Minister for School Education and Literacy be pleased to state:-

(a) whether it has come to the notice of the Government that approximately 5-6 thousand students are appearing for the S.S.L.C examination every year in Sidhanur taluk ;

(b) the Sindhanur taluk has a large number of teachers, whether it has come to the notice of the Government that both time and money are being wasted to teachers who have to travel long distance for the evaluation of S.S.L.C examination answer sheets ;

(c) if so, whether the proposal is before the Government to commence the S.S.L.C evaluation centre in Sindhanur taluk ;

(d) if so, the present stage of the same; and the timelimit within which the S.S.L.C evaluation centre would be commenced in Sindhanur taluk ?

**HANDOVER OF WILDLIFE ARTICLES**

**Sri Kushalappa M.P. (suja) (Local Authorities Constituency)-**

186 (1832) Will the Minister for Forest, Ecology and Environment be pleased to state:-

(a) whether it has come to the notice of the Government that the majority of the people of malnad region are farmers and they cultivators and they are opposing the order that has been issued to handover wildlife articles which have been kept traditionally with them to the department ; if so, the step taken in this regard; (complete details be furnished)

(b) whether the proposal is before the Government for providing exemption by making amendment of the said order and in the interest of farmers and cultivators of the malnad region ?

**SMART METER INSTALLATION, PROBLEM OF BILLING AND ARRANGEMENT OF AGRICULTURE FEEDER IN BIDAR DISTRICT**

**Dr. M.G. Muley (Elected by Legislative Assembly) -**

187 (1770) Will the Minister for Energy be pleased to state:-

(a) the number of domestic householders and commercial shops for which the “ smart meters “ have been installed in Bidar district at present; the total expenditure for the implementation of this scheme ; (taluswise information be furnished)

(b) whether it has come to the notice of the Government that there is a factious increase in the electric bill amount has been found after installation of smart meter; the number of complaints that have been lodged in the district; the details of measure taken by the officers of Gulbarga electricity supply company (GESCOM) to settle these complaints ;

(c) whether there is an arrangement like the Government owned " Independent Meter Testing Lab" in Bidar district to inspect the technical errors and billing software issues that would be caused in smart meters; if not, the facility which is available in the nearby district ;

(d) the number of villages in Bidar district where the scheme of Agriculture feeder bifurcation that is being implemented with the intention of supplying standard and 24/7 electricity for farmer has been completed; the number villages in which the work is yet pending ; (talukwise list be furnished)

(e) whether the "Emergency Response Team" has been constituted in the district level to repair within 24 hours while the transformer (TC) would burn out or arising technical issues in rural regions; the number of transformers where the repair/replacement works have been completed within the prescribed period during the last one year ?

**GRANT RELEASED BY THE GOVERNMENT**

**Sri S.L. Bhojegowda (Teachers' Constituency) -**

188 (1732) Will the Minister for Higher Education be pleased to state:-

(a) the grant that has been released by the Government to Bengaluru North University from the last 4 years till date; the particulars of works for which the said grant has been utilized; complete information alongwith photos of the works and the names of the contractors be furnished ;

(b) the particulars of works for which the tender has been invited in Bengaluru North University from the last 4 years till date; the complete information of contractors who have participated in the said tenders be furnished ; (yearwise/workwise and amountwise complete information be furnished)

(c) whether the said tenders have been complied properly as per the Government order; if not, the action taken by the Government ? (complete information be furnished)

## PREVENTION OF MOBILE PHONE IN SCHOOL STUDENTS

**Sri Prathap Simha Nayak K. (Elected by Legislative Assembly) -**

**Sri T.N. Javarayi Gowda (Elected by Legislative Assembly) -**

189 (1851+1754) Will the Minister for School Education and Literacy be pleased to state:-

(a) whether it has come to notice of the Government that the complete ban on social medias and prevention of using mobile phone either completely or significantly by the school students below the age of 16 years in the State ;

(b) the using of mobile phone is exposing children to extremely dangerous risks and pushing them towards mental stress whether an appropriate step would be taken by the Government to prevent the same ;

(c) since the school-colleges students are suffering from mental stress and depression at the very young age due to the using of mobile phones, whether the Government has contemplated to prevent the same ;

(d) whether an appropriate steps would be taken by the Government immediately to create the necessary awareness and knowledge among the children against the excessive use of mobile phone ?

## PURCHASING REQUIRED MEDICINES OF PHC'S AND CHCS AND DISTRICT HOSPITALS

**Smt. Hemalatha Nayak (Elected by Legislative Assembly) -**

190 (1809) Will the Minister for Health and Family Welfare be pleased to state:-

(a) the grant that has been spent for purchasing medicines in Primary Health Centres (PHC's), Community Health

Centres (CHC's) and district hospitals of the Kalyana Karnataka Regions from the year 2023-24 to 2025-26 ; (yearwise details be furnished)

(b) whether it has come to the notice of the Government that these is a procurement of life saving and essential medicines during the last few months in this region ;

(c) whether the reason for the shortage of medicines in the hospitals that the delay is being caused in the procurement procedure of medicines and the purchasing rules are being violated by the Karnataka State Medicine Suppliers Corporation Limited(KSMSCL) ; (the details of the grant that has been earmarked for the medicine during the last one year and the amount spent for the same be furnished)

(d) whether it has come to the notice of the Government that the medicines are being purchased at excessive price by the poor patients in private medical shops inevitably due to non-availability of medicines in the Government hospitals; whether is it the failure of free health service ;

(e) the particulars of emergency workplans that have been framed by the Government to ensure 100% medicines availability in the Government hospitals and to prevent financial burden which is causing for poor patients ?

## EXTENSION OF AYUSHMAN BHARAT YOJANA BY THE CENTRAL GOVERNMENT TO SENIOR CITIZENS

**Sri P.H. Pujar (Local Authorities Constituency) -**

191 (1743) Will the Minister for Health and Family Welfare be pleased to state:-

(a) the Central Government has extended Ayushman Bharat Yojana to all senior citizens above 70 years of age from 2020 and the Ayushman Vayo Vandana Cards are being issued to eligible beneficiaries in every State, the number of people who have been registered to get

the cards in the State; out of which, the number of persons to whom Vayo Vandana Cards have been distributed ; (districtwise information be furnished)

(b) the number of senior citizens aged 70 years and above 70 years of age in Bagalkot district ; (talukwise separate information of male and female senior citizens be furnished)

(c) the number of beneficiaries who have been registered in Bagalkot district to avail the benefit of the said scheme; the number of Vayo Vandana Cards that have been distributed ; (talukwise information be furnished)

(d) the details of the programmes that have been taken up to ensure that the said scheme has been reached to all eligible senior citizens in the district be furnished ; the particulars of diseases and health problems for which the treatment can be availed under this scheme ; the number of eligible beneficiaries who have got the treatment in the district so far ? (the detailed information be furnished)

## DISTRICTWISE DISTRIBUTION OF FOOD GRAINS AND INSTALLATION OF CCTV'S

**Sri Sharavana T.A. (Elected by Legislative Assembly) -**

192 (1745) Will the Minister for Food and Civil Supplies and Consumer Affairs be pleased to state:-

(a) the manner in which the other grains including rice would be distributed for the districts under the Anna Bhagya Yojana; districtwise complete details of fixed quantity and distributed quantity from 2023 till date be furnished ; (districtwise and yearwise separately be furnished)

(b) whether it has come to the notice of the Government that there is no distribution of 100% to some districts; if so, the reasons for the same;

(c) the number of fair price shops and godowns in the State in which the CCTVs and weigh bridges have been installed and the number of places in which it has been pending; the reasons for the pending so far ?

## NON-AVAILABILITY OF COMPENSATION TO MEMBER OF TALEWADI VILLAGE IN THE LIMIT OF BHIMGAD

**Sri Shantharama Budna Siddi (Nominated) -**

193 (1859) Will the Minister for Forest, Ecology and Environment be pleased to state:-

(a) the number of families of Talewadi village which are coming in the limit of Bhimgad wildlife sanctuary have been relocated and the amount of compensation that has been provided to them ; (the complete information be furnished)

(b) out of the applicants who have submitted the application for relocation of Talewadi village, whether it has come to the notice of the Government that one member each of 4 families has not received the compensation; the reason for not receiving of compensation for the said 4 members and the priority steps that would be taken by the Government to provide the compensation be furnished ?

## GRANT-IN-AID TO KANNADA MEDIUM SCHOOLS

**Sri Puttanna (Teachers' Constituency) -**

194 (1833) Will the Minister for School Education and Literacy be pleased to state:-

(a) the number of unaided Kannada Medium Secondary Schools and Pre-university Colleges that have been commenced and functioning continuously in the State from 1995 to 2025 ; (districtwise details along with address be furnished)

(b) the number of eligible teaching and non teaching staff who are working in the said schools and colleges ; (talukwise details be furnished)

(c) the expenditure that is required for bringing under grant-in-aid of the said schools and colleges ; (details be furnished)

(d) the timelimit within which the said schools and colleges would be brought under grant-in-aid ?

## LACK OF EQUIPMENTS IN GOVERNMENT ITI COLLEGES

**Sri Madhu G. Madegowda (Graduates' Constituency) -**

195 (1765) Will the Minister for Medical Education and Skill Development be pleased to state:-

(a) the number of Government Industrial Training Institutions (ITI) in the State; out of which, the number of colleges that have been reserved for the women ; (districtwise information be furnished)

(b) the number of Government colleges that have been closed due to the shortage of students during the last 5 years ; (districtwise information be furnished)

(c) whether it has come to the notice of the Government that the severe hardship is being faced by the students for learning due to the lack of equipments in the Government colleges as per the revised syllabus of the Directorate General of Training (DGT) of New Delhi ;

(d) if so, the steps taken by the Government to provide the equipments; the period within which the equipments would be provided ; (complete information be furnished)

(e) out of the Government Industrial Training Institutions, the number of Government Industrial Training Institutions which are not having own site for the construction of their own building; the steps taken by the Government to provide the site and construct the building ;

(f) whether the Government has contemplated to commence the ITI college in any prisons of the State for the intention of imparting vocational training ; whether the proposal is received by the Prisons Department in this regard ? (complete information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD -805, - Copies